ಈ ಕೆಟ್ಟ ಪರಿಣಾಮವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಅದನ್ನು ನಿವಾರಣೆ ಮಾಡುವುದಕ್ಕೆ ನೂತನ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೇ? ಎನ್ನುವ ಒಂದು ಮಾತನ್ನು ಕೇಳುತ್ತೇನೆ.

ಅಧ್ಯಕ್ಷರು : ಇದಕ್ಕೆ ಉತ್ತರ ಹೇಳಿ.

ಶ್ರೀ ಎಂ. ಮಹದೇವ್ : ಮಾನ್ಯ ಸದಸ್ಯರ ಸಲಹೆಯನ್ನು ನಾವು ಪರಿಶೀಲನೆ ಮಾಡುತ್ತೇವೆ.

ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ನಿವೇಶನ ಮತ್ತು ಮನೆಗಳ ಖಾತೆ ಬದಲಾವಣೆಗೆ ಅನುಸರಿಸಬೇಕಾದ ನಿಯಮಗಳು

266 (2483) : ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ನಿವೇಶನ ಮತ್ತು ಮನೆಗಳ ಖಾತೆ ಬದಲಾವಣೆಗೆ ಅನುಸರಿಸುವ ನಿಯಮಗಳೇನು;

(ಆ) ಅರ್ಜಿದಾರನು ದಾಖಲಾತಿ ಹಾಜರುಪಡಿಸಿದ ನಂತರ ಖಾತೆ ಬದಲಾವಣೆಗೆ ಬೇಕಾಗುವ ಕಾಲಾವಕಾಶ ಎಷ್ಟು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ. ಎಂ. (ಪೌರಾಡಳಿತ ರಾಜ್ಯ ಸಚಿವರು) :

(ಅ) ಕರ್ನಾಟಕ ಪುರಸಭೆಗಳ ಕಾಯ್ದೆ 1964ರ ಕಲಂ 111 ರನ್ವಯ ಪುರಸಭೆ ಮತ್ತು ಪಟ್ಟಣ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಬರುವ ನಿವೇಶನ ಮತ್ತು ಮನೆಗಳ ಖಾತೆ ಬದಲಾವಣೆ ಮಾಡಬೇಕಾದ ಸಂದರ್ಭದಲ್ಲಿ ಖಾತೆ ಬದಲಾವಣೆ ಮಾಡಲು ಇಚ್ಛಿಸುವ ಅರ್ಜಿದಾರನು ಸಂಬಂಧಪಟ್ಟ ಆಸ್ತಿಯ ಕ್ರಯ ಪತ್ರ ಮಾಡಿದ 3 ತಿಂಗಳ ಅವಧಿಯೊಳಗಾಗಿ ಪುರಸಭೆ ಮತ್ತು ಪಟ್ಟಣ ಪಂಚಾಯತಿಗೆ ಆ ಕುರಿತು ಎಲ್ಲಾ ವಿವರಗಳೊಂದಿಗೆ ಅರ್ಜಿಯನ್ನು ನೀಡಬೇಕಾಗುತ್ತದೆ. ಆಸ್ತಿಯ ಖಾತೆದಾರರು, ಮರಣ ಹೊಂದಿದ ಸಂದರ್ಭದಲ್ಲಿ ಆಸ್ತಿಯ ವಾರಸುದಾರರು ಮರಣ ಹೊಂದಿದ 6 ತಿಂಗಳ ಅವಧಿಯೊಳಗೆ ಆಸ್ತಿಯ ಹಾಗೂ ಇನ್ನಿತರ ಅಗತ್ಯ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಯನ್ನು ನೀಡಬೇಕಾಗುತ್ತದೆ. ಕರ್ನಾಟಕ ಪುರಸಭೆಗಳ ಕಾಯ್ದೆ 1996ರ ಕಲಂ 112 ರನ್ವಯ ಇಂತಹ ಅರ್ಜಿಯನ್ನು ಸದರಿ ಕಾಯ್ದೆಯ ಷೆಡ್ಯೂಲ್-8 ಅಥವಾ ಷೆಡ್ಯೂಲ್-9 ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಕೊಡಬೇಕಾಗುತ್ತದೆ.

(ಆ) ಅರ್ಜಿದಾರನು ಸಂಪೂರ್ಣ ಮಾಹಿತಿಯನ್ನು ಹಾಗೂ ಅಗತ್ಯ ದಾಖಲೆಗಳನ್ನು ನೀಡಿದ್ದಲ್ಲಿ ಕೂಡಲೇ ಖಾತೆ ಬದಲಾವಣೆಯನ್ನು ಮಾಡಲಾಗುವುದು. ಆದರೆ ಅಪೂರ್ಣ ಮಾಹಿತಿ ಹಾಗೂ ದಾಖಲೆಗಳು ಇಲ್ಲದಿದ್ದಲ್ಲಿ ಹಾಗೂ ತಕರಾರುಗಳು ಇದ್ದಲ್ಲಿ ಖಾತೆ ಮಾಡಲು ವಿಳಂಬವಾಗುವುದು.

ಶ್ರೀ ಬಿ. ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ಮನೆಗಳ ಖಾತೆ ಬದಲಾವಣೆ ಬಗ್ಗೆ ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳಲ್ಲಿ 6 ತಿಂಗಳು, 3 ತಿಂಗಳು ಒಳಗಾಗಿ ಖಾತೆಯನ್ನು

ಬದಲಾವಣೆ ಮಾಡುತ್ತೇವೆ ಎಂದು ಅವರು ಹೇಳಿದ್ದಾರೆ. ಆದರೆ ಎಲ್ಲೆಲ್ಲಿ ಪಟ್ಟಣ ಪಂಚಾಯತ್‌ಗಳು ಮತ್ತು ಪುರಸಭೆಗಳು ಇವೆ, ಅಲ್ಲಿ ಒಂದು ಹೊಸ ವಿಚಿತ್ರವಾದ ವಾತಾವರಣ ನಿರ್ಮಾಣವಾಗಿದೆ. ಯಾವುದೇ ನಿವೇಶನ ಮತ್ತು ಮನೆಗಳ ಖಾತೆ ಬದಲಾವಣೆ ಮಾಡಬೇಕಾದರೆ ಕೂಡ ಪುರಸಭೆಯಿಂದ ನಿರ್ಣಯ ಆಗಬೇಕು ಎಂದು ಹೇಳುತ್ತಾರೆ; ಅವರು ಎಲ್ಲ ದಾಖಲೆಗಳನ್ನು ಕೊಟ್ಟರೂ ಕೂಡ ಖಾತೆ ಬದಲಾವಣೆ ಆಗಬೇಕಾದರೆ ಪಟ್ಟಣ ಪಂಚಾಯತ್‌ಗಳಲ್ಲಿ ಮತ್ತು ಪುರಸಭೆಗಳಲ್ಲಿ ಆ ಬಗ್ಗೆ ನಿರ್ಣಯ ಆಗಬೇಕು ಎಂದು ಹೇಳುತ್ತಾರೆ. ಹೀಗೆ ನಿರ್ಣಯ ಮಾಡುವುದಕ್ಕೆ ಎಲ್ಲ ಸದಸ್ಯರನ್ನೂ ಕೇಳಬೇಕು. ಈ ದೃಷ್ಟಿಯಿಂದ ದಾಖಲೆಗಳನ್ನು ಕೊಟ್ಟನಂತರ ಮತ್ತೆ ನಿರ್ಣಯ ಮಾಡುವುದು ಬೇಕಾಗಿಲ್ಲವೆಂಬ ಒಂದು ಸೂಚನೆಯನ್ನು ಈ ಸದನದ ಮೂಲಕ ಕೊಡಬೇಕಾಗುತ್ತದೆ. ದಾಖಲಾತಿ ಕೊಟ್ಟ ನಂತರ ಮತ್ತೆ ಪುರಸಭೆಯ ನಿರ್ಣಯ ಏಕೆ ಬೇಕಾಗುತ್ತದೆ? ಈ ನಿರ್ಣಯ ಬೇಕಾಗಿಲ್ಲವೆಂದು ಅದರಲ್ಲಿ ಅಳವಡಿಕೆ ಮಾಡಬೇಕು. ಮತ್ತೆ ಅರ್ಜಿ ಫಾರ್ಮ್ ತುಂಬಿದರೆ ಸಾಕು, ಆರು ತಿಂಗಳ ಒಳಗೆ ಖಾತೆ ಬದಲಾವಣೆ ಮಾಡಿಕೊಡಲಾಗುತ್ತದೆ ಎಂದು ಹೇಳಿರುತ್ತೀರಿ. ಹೀಗಿದ್ದರೂ ಸಹ ನಿರ್ಣಯ ಮಾಡುವುದು ಕಡ್ಡಾಯ ಇರುವುದನ್ನು ತಪ್ಪಿಸಬೇಕು. ಇದಕ್ಕೆ ಏನಾದರೂ ಒಂದು ವಿಶೇಷ ಸೂಚನೆ ಅಥವಾ ತಿದ್ದುಪಡಿಯನ್ನು ತರುವುದಕ್ಕೆ ಸಾಧ್ಯತೆ ಉಂಟೆ?

ಶ್ರೀ ಮಲ್ಲಿಕಾರ್ಜುನ ಎಂ. ನಾಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಸುಮಾರು ಆರು ತಿಂಗಳ ಒಳಗೆ ಈ ಖಾತೆ ಬದಲಾವಣೆ ಮಾಡಿಕೊಡುವ ಕ್ರಮ ಇದೆ. ಪುರಸಭೆಯವರು ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆಂದು ಮಾನ್ಯ ಸದಸ್ಯರು ಹೇಳಿದರು. ಮಾನ್ಯ ಶಾಸಕರು ಇದನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಾನು ಅಲ್ಲಿರತಕ್ಕಂಥ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಏನು ಖಾತೆಗಳು ಬದಲಾವಣೆ ಆಗಿಲ್ಲ, ಅಂಥಾದ್ದನ್ನು ಕೂಡಲೇ ಮಾಡುವುದಕ್ಕೆ ಇವತ್ತೇ ಆದೇಶವನ್ನು ಕೊಡುತ್ತೇನೆ. ಇನ್ನು ಮುಂದೆ ಈ ತರಹ ಆಗದಂತೆ ನೋಡಿಕೊಳ್ಳಲು ನಾನಾ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ಪಟ್ಟಣ ಪಂಚಾಯ್ತಿ ಮತ್ತು ಪುರಸಭೆಯಲ್ಲೂ ಈ ನಿವೇಶನ ಮತ್ತು ಖಾತೆ ಬದಲಾವಣೆಗೆ ಪ್ರತಿಯೊಬ್ಬ ಸದಸ್ಯರನ್ನು ಬೇಡತಕ್ಕಂತಹ ಪರಿಸ್ಥಿತಿ ಉಂಟಾಗಿರುತ್ತದೆ. ಇದನ್ನು ತಪ್ಪಿಸಬೇಕಾದರೆ ಅವರಿಗೆ ನಿರ್ದಿಷ್ಟವಾದ ಸೂಚನೆಯನ್ನು ಸರ್ಕಾರ ಕೊಡಬೇಕು; ಅವರು ದಾಖಲಾತಿಯನ್ನು ಕೊಟ್ಟ ನಂತರ 6 ತಿಂಗಳು ಅಥವಾ 3 ತಿಂಗಳ ಅವಧಿ ಎಂದೇನಿದೆ, ಈ ಅವಧಿಯೊಳಗೆ ಕೊಡದೇ ಇದ್ದಾಗ ನೀವು ತಿಳಿಸಬೇಕು; ದಾಖಲಾತಿಗಳನ್ನು ಕೊಟ್ಟ ಇಷ್ಟು ದಿವಸದೊಳಗೆ ನಾವು ಖಾತೆಯನ್ನು ಮಾಡುತ್ತೇವೆ, ಯಾವುದೇ ಸದಸ್ಯರ ಮನೆ ಬಾಗಿಲಿಗೆ ಹೋಗುವ ಅವಶ್ಯಕತೆ ಇಲ್ಲ ಎನ್ನುವ ನಿರ್ಣಯವನ್ನು ಮಾಡಿ ಸರ್ಕಾರ ಈ ಬಗ್ಗೆ ಅಧಿಸೂಚನೆಯನ್ನು ಹೊರಡಿಸಬೇಕು.

ಶ್ರೀ ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ನಾವು ತಿಳಿದುಕೊಂಡಿದ್ದೇವೆ. ಇನ್ನು ಮುಂದೆ ನಗರ ಸಭೆ ಅಥವಾ ಪುರಸಭೆಗಳ ಮುಖ್ಯಾಧಿಕಾರಿಗಳಿಗೆ ಸೂಚನೆ ನೀಡಿ, ನಿವೇಶನ ಮತ್ತು ಮನೆಗಳ ಬದಲಾವಣೆಯ ಕೆಲಸವನ್ನು ಮುಗಿಸಿಕೊಡುತ್ತೇವೆ.